(ಸಾಕ್ಷಿಯನ್ನು ದಿನಾಂಕ: 20.06.2022 ರಂದು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು)

**ಪಾಟೀ ಸವಾಲುಃ ಶ್ರೀ ಬಿ.ಆರ್.ಆರ್. ವಾದಿ ಪರ ವಕೀಲರಿಂದಃ**

ನಾನು ಬಿ.ಎ ಪದವೀಧರ ಇರುತ್ತೇನೆ. ಮಾರ್ಕೋನಹಳ್ಳಿಯ ಸರ್ವೆ ನಂಬರ್ 61 ರ ಜಮೀನು 2 ಎಕರೆ 20 ಗುಂಟೆಯನ್ನು ನಾನು ನೋಡಿರುತ್ತೇನೆ. ಸದರಿ ಜಮೀನಿನ ಚಕ್ಕುಬಂದಿ ಪೂರ್ವಕ್ಕೆ-ಬಡೆಗೌಡರವರ ಜಮೀನು, ಪಶ್ಚಿಮಕ್ಕೆ-ರಸ್ತೆ, ಉತ್ತರಕ್ಕೆ-ತಿಮ್ಮರಾಯಸ್ವಾಮಿ ದೇವಸ್ಥಾನ ಜಮೀನು, ದಕ್ಷಿಣಕ್ಕೆ-ಎಂ.ಎಂ. ರಾಮಣ್ಣ ರವರಿಗೆ ಸೇರಿದ ತಿಮ್ಮಯ್ಯ ಬಿನ್ ಬಜ್ಜೆಗೌಡರವರ ಜಮೀನು ಇರುತ್ತದೆ ಎಂದರೆ ಸರಿ. ನಾನು ಸದರಿ ಜಮೀನನ್ನು ಈಗ್ಗೆ 30 ವರ್ಷಗಳಿಂದ ನೋಡಿರುತ್ತೇನೆ. ಮೊದಲಿಗೆ ನನ್ನ ತಂದೆ ಮಾಯಣ್ಣ ಸದರಿ ಜಮೀನಿನ ಮಾಲೀಕರಾಗಿದ್ದರು. ನನ್ನ ತಂದೆ ಮಾಯಣ್ಣ ಎಂ.ಕೆ.ಕೆಂಪಯ್ಯ ರವರಿಂದ ಕ್ರಯದ ಕರಾರು ಬರೆಸಿಕೊಂಡಿದ್ದರು. ಸದರಿ ಜಮೀನು ಎಂ.ಕೆ.ಕೆಂಪಯ್ಯ ರವರಿಗೆ ಸರ್ಕಾರದಿಂದ ಮಂಜೂರಾಗಿರುವ ಆಸ್ತಿ ಇರುತ್ತದೆ ಎಂದರೆ ಸರಿ. ನಾನು ಎಂ.ಕೆ. ಕೆಂಪಯ್ಯ ರವರನ್ನು ನೋಡಿರುತ್ತೇನೆ. ಸದರಿ ಎಂ.ಕೆ. ಕೆಂಪಯ್ಯ ರವರು ನಿವೃತ ನೌಕರರಾಗಿದ್ದರು. ಸದರಿ ಎಂ.ಕೆ. ಕೆಂಪಯ್ಯ ರವರು ನನ್ನ ದೂರದ ಸಂಬಂಧಿ ಇರುತ್ತಾರೆ. ಎಂ.ಕೆ. ಕೆಂಪಯ್ಯ ರವರಿಗೆ ಹೊನ್ನಮ್ಮ ಎಂಬ ಹೆಂಡತಿ ಇದ್ದರು ಎಂದರೆ ಸರಿ. ಎಂ.ಕೆ. ಕೆಂಪಯ್ಯ ರವರಿಗೆ ಎಂ.ಕೆ.ಮಾಯಮ್ಮ, ಎಂ.ಕೆ.ತಿಮ್ಮೇಶ ಪ್ರಭು, ಎಂ.ಕೆ.ಮಾಯರಾಜು, ಎಂ.ಕೆ.ರಾಮಕೃಷ್ಣ, ಎಂ.ಕೆ.ಕೆಂಪಕುಮಾರ್ ಮತ್ತು ಎಂ.ಕೆ. ಪ್ರಸನ್ನಕುಮಾರ್ ಎಂಬ ಆರು ಜನ ಮಕ್ಕಳಿದ್ದರು ಎಂದರೆ ಸರಿ. ಎಂ.ಕೆ.ಮಾಯರಾಜು ಈಗ ಮೃತಪಟ್ಟಿರುತ್ತಾರೆ.

ಪ್ರತಿವಾದಿ 3 ರಿಂದ 11 ರವರು ಎಂ.ಕೆ.ಮಾಯಮ್ಮನವರ ಮಕ್ಕಳು ಇರುತ್ತಾರೆ. 16 ನೇ ಪ್ರತಿವಾದಿ ಗೋಪಿನಾಥ್ ಮೃತ ಎಂ.ಕೆ. ಪ್ರಸನ್ನಕುಮಾರ್ ರವರ ಒಬ್ಬನೇ ಮಗ ಇರುತ್ತಾನೆ. ಎಂ.ಕೆ.ರಾಮಕೃಷ್ಣ ರವರು ಮೃತಪಟ್ಟಿದ್ದು, ಪ್ರತಿವಾದಿ 17 ರಿಂದ 19 ರವರು ಅವರ ಹೆಂಡತಿ ಮತ್ತು ಮಕ್ಕಳಿರುತ್ತಾರೆ ಎಂದರೆ ಸರಿ. ಎಂ.ಕೆ. ಕೆಂಪಯ್ಯರವರಿಗೆ ದಾವಾ ಸ್ವತ್ತು ಮಂಜೂರಾದ ಬಗ್ಗೆ ಘನ ಉಚ್ಚ ನ್ಯಾಯಾಲಯದಲ್ಲಿ ರಿಟ್ ಅರ್ಜಿ ಸಲ್ಲಿಸಿದ್ದ ಬಗ್ಗೆ ನನಗೆ ಮಾಹಿತಿ ಇರುವುದಿಲ್ಲ. ಎಂ.ಕೆ.ಕೆಂಪಯ್ಯರವರು ಜಮೀನು ಮಂಜೂರಾದ ಸಮಯದಲ್ಲಿ ವವ್ಯವಸಾಯ ಮಾಡುತ್ತಿರಲಿಲ್ಲ ಆಗ ದಾವಾ ಸ್ವತ್ತು ಖಾಲಿ ಜಮೀನಾಗಿತ್ತು. 45 ರಿಂದ 50 ವರ್ಷದ ತೆಂಗಿನ ಗಿಡಗಳು ದಾವಾ ಸ್ವತ್ತಿನಲ್ಲಿ ಇರುತ್ತವೆ ಎಂದರೆ ಸಾಕ್ಷಿಯು 30 ವರ್ಷದ ತೆಂಗಿನ ಗಿಡಗಳು ಇರುತ್ತವೆ ಎಂದು ನುಡಿಯುತ್ತಾರೆ. ಸದರಿ ಜಮೀನಿನಲ್ಲಿ

ಯಾವುದೇ ಪಂಪ್ ಹೌಸ್ ಇರಲಿಲ್ಲ. ಎಂ.ಕೆ. ಕೆಂಪಯ್ಯ ರವರು ಶಿಕ್ಷಣ ಇಲಾಖೆಯಲ್ಲಿ ಅಟೆಂಡರ್ ಆಗಿ ಕೆಲಸ ಮಾಡುತ್ತಿದ್ದರು. ಎಂ.ಕೆ. ಕೆಂಪಯ್ಯ ರವರು ಬೆಂಗಳೂರಿನ ಗವಿಪುರಂ ಗುಟ್ಟಹಳ್ಳಿಯಲ್ಲಿ ವಾಸವಾಗಿದ್ದರು. ಅವರು ಸಾಯುವವರೆವಿಗೂ ಅದೇ ಮನೆಯಲ್ಲಿ ವಾಸವಾಗಿದ್ದರು.

ಜಮೀನು ಎಂ.ಕೆ. ಕೆಂಪಯ್ಯ ರವರಿಗೆ ಮಂಜೂರಾದ ಸಮಯದಲ್ಲಿ ಆತನ ಇಬ್ಬರು ಮಕ್ಕಳು ಎಂ.ಕೆ. ಕೆಂಪಯ್ಯ ನವರ ಜೊತೆಯಲ್ಲಿ ಇದ್ದರು, ಇಬ್ಬರು ಮಕ್ಕಳು ಪ್ರತ್ಯೇಕವಾಗಿದ್ದರು. ತಿಮ್ಮೇಶ್ ಪ್ರಭು ರವರು ಅವರ ಜೊತೆಯಲ್ಲಿದ್ದುದು ನನಗೆ ಜ್ಞಾಪಕವಿರುತ್ತದೆ. ವಾದಿ ದಾವಾ ಶಿರೋನಾಮೆಯಲ್ಲಿ ತೋರಿಸಿರುವ ವಿಳಾಸದಲ್ಲಿ ವಾಸವಾಗಿದ್ದರು. ಅವರು ಸುಮಾರು 45 ವರ್ಷಗಳಿಂದ ಸದರಿ ವಿಳಾಸದಲ್ಲಿ ವಾಸವಾಗಿರುತ್ತಾರೆ. ವಾದಿ ಮತ್ತು ಆತನ ತಂದೆ ಎಂ.ಕೆ. ಕೆಂಪಯ್ಯ ರವರಿಗೆ ಬುದುಕಿರುವವರೆವಿಗೂ ಯಾವುದೇ ಭಿನ್ನಾಭಿಪ್ರಾಯಗಳು ಇರಲಿಲ್ಲ ಎಂದರೆ ನನಗೆ ಗೊತ್ತಿಲ್ಲ. ಎಂ.ಕೆ. ಕೆಂಪಯ್ಯ ರವರು ಮೃತಪಟ್ಟಾಗ ನಾನು ಹೋಗಿರುವುದಿಲ್ಲ. ಆಗ ನಾನು ಬೆಂಗಳೂರಿನಲ್ಲಿದ್ದ ಕಾರಣ ನನಗೆ ಸದರಿ ವಿಚಾರ ಗೊತ್ತಿರುವುದಿಲ್ಲ. ಎಂ.ಕೆ. ಕೆಂಪಯ್ಯ ರವರು ಗವಿಪುರಂ ನಲ್ಲಿ ಸ್ವಂತ ಮನೆಯಲ್ಲಿ ವಾಸವಾಗಿದ್ದರು. ಆತನಿಗೆ ಇದ್ದ ಮನೆ ಒಂದು ಅಂತಸ್ಥಿನ ಮನೆ ಇರುತ್ತದೆ, ಆತನಿಗೆ ಬಾಡಿಗೆಗಳು ಬರುತ್ತಿದ್ದವೊ ಇಲ್ಲವೊ ಎಂಬುದು ನನಗೆ ಗೊತ್ತಿಲ್ಲ. ಎಂ.ಕೆ.ಕೆಂಪಯ್ಯ ಮತ್ತು ಆತನ ಮಕ್ಕಳಿಗೆ ಎಂ.ಕೆ.ಕೆಂಪಯ್ಯ ರವರು ಜೀವಂತವಾಗಿದ್ದಾಗ ಸಾಕಷ್ಟು ನಿವೇಶನಗಳು ಮತ್ತು ಮನೆಗಳು ಇದ್ದವು ಎಂದರೆ ನನಗೆ ಗೊತ್ತಿಲ್ಲ.

ಎಂ.ಕೆ. ಕೆಂಪಯ್ಯ ರವರು ತಮ್ಮ ಜಮೀನನ್ನು ಇತರೆ ಮೂರನೇ ವ್ಯಕ್ತಿಗಳಿಂದ ರಕ್ಷಿಸುವ ಕೆಲಸಕ್ಕೆ ಮತ್ತು ಸದರಿ ಜಮೀನಿನಲ್ಲಿ ವ್ಯವಸಾಯ ಮಾಡಲು ನಮ್ಮ ತಂದೆಗೆ ಹೇಳುತ್ತಿದ್ದರು ಎಂದರೆ ನನಗೆ ಗೊತ್ತಿಲ್ಲ. ಆಗ ನಾನು ಊರಿನಲ್ಲಿ ವಾಸವಾಗಿರಲಿಲ್ಲ. ನಾನು ಬೆಂಗಳೂರಿನಲ್ಲಿ ವಾಸವಾಗಿದ್ದೆನು. ನಾನು 1979 ರಿಂದ ಬೆಂಗಳೂರಿನಲ್ಲಿ Transport Department ನಲ್ಲಿ ಕೆಲಸ ಮಾಡುತ್ತಿದ್ದೇನೆ. ದಾವಾ ಸ್ವತ್ತನು ಬಿಟ್ಟು ಎಂ.ಕೆ. ಕೆಂಪಯ್ಯ ರವರಿಗೆ ಮಾರ್ಕೋನಹಳ್ಳಿ ಗ್ರಾಮದಲ್ಲಿ ಬೇರೆ ಯಾವುದೇ ಆಸ್ತಿ ಇರಲಿಲ್ಲ.

ದಾವಾ ಆಸ್ತಿಗೆ ಸಂಬಂಧಿಸಿದಂತೆ ನನಗೆ ಜಯರಾಮ್ ಎಂಬ ವಕೀಲರಿಂದ ದಿನಾಂಕಃ15.05.2014 ರಂದು ನೋಟಿಸು ಬಂದಿತ್ತು ಎಂದರೆ ಸರಿ. ಆ ಸಂದರ್ಭದಲ್ಲಿ ದಾವಾ ಸ್ವತ್ತಿನ ಸ್ವಾಧೀನ ಮತ್ತು ಮಾಲೀಕತ್ವ ಎಂ.ಕೆ. ಕೆಂಪಯ್ಯ ಮತ್ತು ಮಕ್ಕಳಲ್ಲಿತ್ತು ಎಂದರೆ ಸರಿಯಲ್ಲ.

ನನಗೆ 1995 ರಲ್ಲಿ ನಮ್ಮ ತಂದೆ ಭಾಗ ಕೊಟ್ಟ ಸಂದರ್ಭದಲ್ಲಿ ನಮ್ಮ ತಂದೆಗೆ ಎಂ.ಕೆ. ಕೆಂಪಯ್ಯ ರವರು ಕ್ರಯದ ಕರಾರು ಪತ್ರ ಬರೆದುಕೊಟ್ಟಿದೆ ಎಂದು ಹೇಳಲಾಗುವ ವಿಚಾರ ತಿಳಿದು ಬಂದಿರುತ್ತದೆ. ಕೆ.ಎಸ್. ಚಂದ್ರಹಾಸ ಎಂಬ ವಕೀಲರ ಮೂಲಕ ನಾನು ಜಯರಾಮ್ ವಕೀಲರಿಗೆ ಪ್ರತ್ಯುತ್ತರ ನೀಡಿರುತ್ತೇನೆ ಎಂದರೆ ಸರಿ. ಸದರಿ ಪ್ರತ್ಯುತ್ತರದಲ್ಲಿ ನಮ್ಮ ತಂದೆಗೆ ಅಗ್ರಿಮೆಂಟ್ ಮೂಲಕ ದಾವಾ ಸ್ವತ್ತು ಬಂದಿರುತ್ತದೆ ಎಂದು ನಮೂದು ಮಾಡಿರುವುದಿಲ್ಲ. ಸದರಿ ಪ್ರತ್ಯುತ್ತರ ನೀಡುವ ಸಮಯದಲ್ಲಿ ಕ್ರಯದ ಕರಾರು ಪತ್ರ ನನ್ನ ಬಳಿ ಇಲ್ಲದೇ ಇರುವ ಕಾರಣ ನಾನು ಹೇಳಿರುವುದಿಲ್ಲ ಎಂದರೆ ಸರಿಯಲ್ಲ. ಸದರಿ ಕ್ರಯದ ಕರಾರು ಪತ್ರದ ವಿಚಾರವನ್ನು ನಾನು ನಮ್ಮವಕೀಲರಿಗೆ ತಿಳಿಸಿರುತ್ತೇನೆ. ಆದರೆ, ಅವರು ಪ್ರತ್ಯುತ್ತರದಲ್ಲಿ ಅದನ್ನು ಬಿಟ್ಟಿರುತ್ತಾರೆ. ಪ್ರತಿವಾದ ಪತ್ರ ಸಲ್ಲಿಸಲು ವಕೀಲರಿಗೆ ನಾನೇ ಮಾಹಿತಿ ನೀಡಿರುತ್ತೇನೆ. ಅದೇ ರೀತಿ ಕೆ.ಎಸ್.ಚಂದ್ರಹಾಸ ವಕೀಲರಿಗೆ ಪ್ರತ್ಯುತ್ತರ ನೀಡಲು ಮಾಹಿತಿಯನ್ನು ನಾನೇ ನೀಡಿರುತ್ತೇನೆ.

ದಿನಾಂಕಃ 01.03.1995 ರ ವಿಭಾಗ ಪತ್ರದಲ್ಲಿ ನಮ್ಮ ತಂದೆ ಯಾವ ಆಧಾರದ ಮೇಲೆ ದಾವಾ ಸ್ವತ್ತಿನಲ್ಲಿ ಸ್ವಾಧೀನದಲ್ಲಿದ್ದರು ಎಂದು ನಮೂದು ಮಾಡಿರುವುದಿಲ್ಲ. ನಾನು ಸದರಿ ವಿಭಾಗ ಪತ್ರದಂತೆ ಈಗ ಸ್ವಾಧೀನದಲ್ಲಿರುತ್ತೇನೆ. ನಿ.ಡಿ.16 ರ ದಾಖಲೆಯನ್ನು 2000-01 ರಲ್ಲಿ ನನ್ನ ವಶಕ್ಕೆ ನನ್ನ ತಂದೆ ನೀಡಿರುತ್ತಾರೆ. ನಾನು ವಕೀಲರಿಗೆ ಪ್ರತ್ಯುತ್ತರ ನೀಡುವ ಸಂದರ್ಭದಲ್ಲಿ ನಿ.ಡಿ.16 ರ ಕರಾರು ಪತ್ರವನ್ನು ವಕೀಲರ ಬಳಿ ತೆಗೆದುಕೊಂಡು ಹೋಗಿರುವುದಿಲ್ಲ. ನಿ.ಡಿ.16 ರಲ್ಲಿ ಸಾಕ್ಷಿ ಸಹಿ ಹಾಕಿರುವ ಬೇಗೂರಯ್ಯ ಅಲಿಯಾಸ್ ಪಾಪಣ್ಣ ರವರು ತಿಪ್ಪೂರು ಗ್ರಾಮದವರಾಗಿದ್ದು ಅವರು ಜೀವಂತವಾಗಿದ್ದಾರೆ. ಅದೇ ರೀತಿ 2 ನೇ ಸಾಕ್ಷಿದಾರ ಗೌಡಯ್ಯ ರವರು ಸಿಂಗೋನಹಳ್ಳಿ ಅಗ್ರಹಾರ ಗ್ರಾಮದವರಾಗಿದ್ದು ಅವರು ಕೂಡ ಜೀವಂತವಾಗಿರುತ್ತಾರೆ. ನಿ.ಡಿ.16 ರ ಕರಾರು ಪತ್ರ ಆಗುವ ಸಂದರ್ಭದಲ್ಲಿ ನಾನು ಸದರಿ ಸ್ಥಳದಲ್ಲಿರಲಿಲ್ಲ. ನಾನು ಸಾಕ್ಷಿದಾರರಾದ ಬೇಗೂರಯ್ಯ ಅಲಿಯಾಸ್ ಪಾಪಣ್ಣ ಮತ್ತು ಗೌಡಯ್ಯ ರವರ ಸಹಿಗಳನ್ನು ಕರಾರು ಪತ್ರದಲ್ಲಿ ಬಿಟ್ಟು ಬೇರೆ ಎಲ್ಲೂ ನೋಡಿರುವುದಿಲ್ಲ. ಅವರ ಹೆಸರು ಮತ್ತು ವಿಳಾಸಗಳನ್ನು ನನ್ನ ತಂದೆ ನನಗೆ ತಿಳಿಸಿದ್ದರು. ನಿ.ಡಿ.16 ರ ದಾಖಲೆಯಲ್ಲಿ ಸಾಕ್ಷಿದಾರರ ತಂದೆಯ ಹೆಸರು ಅಥವಾ ವಿಳಾಸ ನಮೂದಾಗಿರುವುದಿಲ್ಲ ಎಂದರೆ ಸರಿ.

ಮಾರ್ಕೋನಹಳ್ಳಿಯ ಗ್ರಾಮದ ಸರ್ವೆ ನಂಬರ್ 38 ಬಡೆಗೌಡ ಚನ್ನಪ್ಪರವರಿಗೆ ಸೇರಿರುತ್ತದೆ. ಸರ್ವೆ ನಂಬರ್ 39 ತಿಮ್ಮರಾಯಸ್ವಾಮಿ ಗೊಡಗಿ ಜಮೀನು ಇರುತ್ತದೆ. ಮಾರ್ಕೋನಹಳ್ಳಿಯ ಗ್ರಾಮದ ಸರ್ವೆ ನಂಬರ್ 1 ಬಡೆಗೌಡ ಚನ್ನಪ್ಪನವರಿಗೆ ಸೇರಿದ್ದು, ಸರ್ವೆ ನಂಬರ್ 49

ತಿಮ್ಮರಾಯಸ್ವಾಮಿ ಗೊಡಗಿ ಜಮೀನು ಮತ್ತು ಬಜ್ಜಯ್ಯ ರವರಿಗೆ ಸೇರಿರುತ್ತದೆ. ನಿ.ಡಿ.16 ರಲ್ಲಿ ನಮೂದು ಮಾಡಿರುವ ಸರ್ವೆ ನಂಬರ್ 46 ಬಜ್ಜಯ್ಯನ ಜಮೀನು ಅಥವಾ ತಿಮ್ಮರಾಯ ಸ್ವಾಮಿ ಗೊಡಗಿ ಜಮೀನು ಇರುತ್ತದೆ. ದಾವಾ ಸ್ವತ್ತಿನ ಉತ್ತರಕ್ಕೆ ಅಥವಾ ದಕ್ಷಿಣಕ್ಕೆ ಸರ್ವೆ ನಂಬರ್ 48 ಬರುತ್ತದೆ. ದಾವಾ ಸ್ವತ್ತಿನ ಮೂರು ಕಡೆ ಹಿಡುವಳಿ ಜಮೀನು ಇದ್ದು, ಒಂದು ಕಡೆ ರಸ್ತೆ ಇರುತ್ತದೆ. ನಿ.ಡಿ.16 ರ ಅನುಸೂಚಿಯಲ್ಲಿ ದಾವಾ ಸ್ವತ್ತಿನ ಯಾವುದೇ ಕಡೆ ರಸ್ತೆ ಎಂದು ನಮುದಾಗಿರುವುದಿಲ್ಲ ಎಂದರೆ ಸರಿ.

ಎಂ.ಕೆ. ಕೆಂಪಯ್ಯನವರು ಯಾವ ಭಾಷೆಯಲ್ಲಿ ಸಹಿ ಮಾಡುತ್ತಿದ್ದರು ಎಂದು ನಾನು ಖುದ್ದಾಗಿ ನೋಡಿರುವುದಿಲ್ಲ, ಸಾಕ್ಷಿ ಸ್ವ-ಇಚ್ಛೆಯಿಂದ ಮುಂದುವರೆದು ಸಾಮಾನ್ಯವಾಗಿ ಕನ್ನಡ ಭಾಷೆಯಲ್ಲಿ ಸಹಿ ಮಾಡುತ್ತಿದ್ದರು ಎನ್ನುತ್ತಾರೆ. ಆತ ಕನ್ನಡ ಭಾಷೆಯಲ್ಲಿ ಸಹಿ ಮಾಡುತ್ತಿದ್ದ ಎಂದು ತೋರಿಸಲು ಒಂದು ಭೋಗ್ಯ ಪತ್ರ ಹಾಜರುಪಡಿಸಿರುತ್ತೇನೆ. ಈ ದಾವೆಯಲ್ಲಿ ಪ್ರತಿವಾದ ಪತ್ರ ಸಲ್ಲಿಸುವ ಸಮಯದಲ್ಲಿ ಕರಾರು ಪತ್ರದ ಸಾಕ್ಷಿಗಳನ್ನು ಭೇಟಿಯಾಗಿ ವಿಚಾರ ತಿಳಿದುಕೊಂಡಿರುವುದಿಲ್ಲ. ಆದರೆ, ನಮ್ಮ ತಂದೆ ಆ ಬಗ್ಗೆ ನನಗೆ ತಿಳಿಸಿರುತ್ತಾರೆ. ಕ್ರಯದ ಕರಾರು ಪತ್ರದ ಸಾಕ್ಷಿಗಳನ್ನು ನ್ಯಾಯಾಲಯಕ್ಕೆ ಕರೆಯಿಸಿ ಸಾಕ್ಷಿ ಕೊಡಿಸಲು ನನಗೆ ಯಾವುದೇ ತೊಂದರೆ ಇರುವುದಿಲ್ಲ. ಎಂ.ಕೆ.ಕೆಂಪಯ್ಯ ರವರ ಕುಟುಂಬದವರು ದಾವಾ ಸ್ವತ್ತಿನಲ್ಲಿ ಕುಟುಂಬದ ಪರವಾಗಿ ವ್ಯವಸಾಯ ಮಾಡುತ್ತಿದ್ದ ಕಾರಣ ಅವರಿಗೆ ಸರ್ಕಾರ ಜಮೀನು ಮಂಜೂರು ಮಾಡಿರುತ್ತದೆ ಎಂದರೆ ಸರಿ.

**ಈ ಹಂತದಲ್ಲಿ ಮುಂದುವರೆದ ಪಾಟೀ ಸವಾಲಿಗಾಗಿ ವಕೀಲರು ಸಮಯವಕಾಶವನ್ನು ಕೋರಿದ್ದು ನೀಡಲಾಯಿತು.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಗಿದೆ.)

ಓ.ಹೇ.ಕೇ. ಸರಿ ಇದೆ

**ಸಹಿ/-**
ಹಿರಿಯ ಸಿವಿಲ್ ನ್ಯಾಯಾಧೀಶರು
ಮತ್ತು ಜೆ.ಎಂ.ಎಫ್.ಸಿ,
ಕುಣಿಗಲ್.